


# ಪುಷ್ಪಾವೃತ ಕ್ರುಕೇಡ್ ಸ್ಟ್ರೀಟ್!

ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೊ ಕೊಲ್ಲಿ ಪ್ರದೇಶ ಸಮಪ್ರಮಾಣದ ಏರಿಳಿತವುಳ್ಳ ಬೆಟ್ಟಸಾಲುಗಳು ಅಸಾಧಾರಣ ಪ್ರಾಕೃತಿಕ ವೈಶಿಷ್ಟ್ಯತೆಯಿಂದ ಕೂಡಿದೆ. ಅಲ್ಲಿನ ಗೋಲ್ಡನ್‌ಗೇಟ್ ಬ್ರಿಡ್ಜ್, ಅಲ್ಕಟ್ರಾಜ್ ಐಲ್ಯಾಂಡ್, ಹೈಡೆ ಕೇಬಲ್ ಕಾರ್ ಜೊತೆ ಜೊತೆಗೆ ಇಲ್ಲಿನ ಮನಮೋಹಕ ಇಳಿಜಾರು ರಸ್ತೆಗಳು ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ.

'ಟಾನ್ ಆಫ್ ಕ್ರೇಜ್ ಸ್ಟೀಪ್ ಸ್ಟ್ರೀಟ್' ಎಂದೇ ಹೆಸರಾದ ಸ್ಯಾನ್‌ಫ್ರಾನ್ಸಿಸ್ಕೊ ಕೊಲ್ಲಿ ಪ್ರದೇಶ ಇಳಿಜಾರಿನಲ್ಲಿ ನಡೆಯುವ ಅಥವಾ ಕಾರಿನಲ್ಲಿ ಕುಳಿತು ನಿಧಾನವಾಗಿ ಚಲಿಸಿ ಆನಂದಿಸುವ ಅನುಭವವನ್ನು ಪ್ರವಾಸ ಪ್ರಿಯರು ತಮ್ಮ ನೆನಪಿನ ಬುತ್ತಿಯಲ್ಲಿ ದಾಖಲೆ ಮಾಡಿಕೊಳ್ಳಲೇಬೇಕು.

ಕೊಲ್ಲಿ ಪ್ರದೇಶದ ರಷ್ಯನ್ ಹಿಲ್‌ನಲ್ಲಿನ ಉತ್ತರದಿಂದ ದಕ್ಷಿಣ ಅಡ್ಡ ಮಾರ್ಗದ 'ಹೈಡ್' ಮತ್ತು 'ಲಿವೆನ್ವತರ್' ನಡುವಿನಲ್ಲಿನ ಪೂರ್ವ ಪಶ್ಚಿಮಾಭಿಮುಖದ 'ಲ್ಯಾಂಬರ್ಡ್' ರಸ್ತೆಯ ಅಪಾಯಕಾರಿ ಇಳಿಜಾರು 'ಕ್ರುಕೇಡ್ ಸ್ಟ್ರೀಟ್' ಜಗದ್ವಿಖ್ಯಾತ. ಸಮುದ್ರ ತೀರಕ್ಕೆ ಲಂಬವಾಗಿ ಪೂರ್ವದಿಂದ ಪಶ್ಚಿಮಕ್ಕೆ 600 ಅಡಿ, ಉತ್ತರದಿಂದ ದಕ್ಷಿಣಕ್ಕೆ 30 ರಿಂದ 35 ಅಡಿ ಅಳತೆಯುಳ್ಳ ಮಾರ್ಗ. ಕಡಿದಾದ ಈ ಇಳಿಜಾರು ಮಾರ್ಗ ಪಾದಚಾರಿಗಳಿಗೆ, ವಾಹನ ಸಂಚಾರಿಗಳಿಗೆ ಮೃತ್ಯುಕಂಟಕವಾಗಿತ್ತು. ಈ ಮಾರ್ಗದ ಅನಾಮತ್ ಬಾಗುವಿಕೆಯನ್ನು ಕಡಿಮೆಗೊಳಿಸಿ ಸಂಚಾರಯೋಗ್ಯಗೊಳಿಸಲಿಕ್ಕೆ ಈ ರಸ್ತೆಯ ಮಹಲುಗಳ ಮಾಲೀಕರ ಸಂಘ, ಕಾರ್ಲ್‌ಹೆನ್ರಿಯ ನೇತೃತ್ವದಲ್ಲಿ ಹಲವಷ್ಟು ಕ್ರಮ ತೆಗೆದುಕೊಂಡರು.

1922ರಲ್ಲಿ 8 ಹೇರ್‌ಪಿನ್ ತಿರುವುಗಳನ್ನು ರೂಪಿಸಲಾಯಿತು. ಇದರಿಂದ ಮಾರ್ಗದ ಇಳಿಜಾರು ಶೇ. 27ರಷ್ಟು ಕಡಿಮೆಗೊಂಡಿತು. ಪ್ರಸಿದ್ಧ ಪೈಂಟರ್ ರೋವೆನಾ ವೀಕ್ಸ್‌ನ ಸಲಹೆಯಂತೆ ತಿರುವುಗಳಿಗೆ ಕೆಂಪು ಇಟ್ಟಿಗೆ ಸಿಮೆಂಟ್‌ಗಳಿಂದ ನೆಲಹಾಸನ್ನು ನಿರ್ಮಿಸಲಾಯಿತು. ಇಕ್ಕೆಲಗಳಲ್ಲಿ ಪಾದಚಾರಿಗಳು ಸುಲಭವಾಗಿ ನಡೆದಾಡಲು ಮೇಲಿನಿಂದ ಕೆಳವರೆಗೆ ಹ್ಯಾಂಡ್ ರೈಲಿಂಗ್‌ನೊಡನೆ ಮೆಟ್ಟಿಲುಗಳನ್ನು ನಿರ್ಮಿಸಿ, ಮಧ್ಯಭಾಗ ಕಾರಿನ ಏಕಮುಖಿ ಸಂಚಾರಕ್ಕೆ ಅನುವು ಮಾಡಲಾಯಿತು. ಕಾರು ಚಲಿಸುವ ವೇಗವನ್ನು ಗಂಟೆಗೆ 5 ಕಿ.ಮೀ.ಗೆ ನಿಗದಿಪಡಿಸಲಾಯಿತು.

ಬರಬರುತ್ತಾ ತಿರುವುಗಳ ಅಂಚಿನುದ್ದಕ್ಕೂ ಬಣ್ಣಬಣ್ಣದ ಹೂ ಗಿಡಗಳನ್ನು ಹಸಿರು ಕ್ರೋಟನ್‌ಗಳನ್ನು ಬೆಳೆಸಲಾಯಿತು. ಇಂದು ವಿವಿಧ ಬಣ್ಣದ ಹೂಗಳಿಂದ ನಳನಳಿಸುತ್ತಿರುವ ಈ ಸ್ಟ್ರೀಟ್‌ನಲ್ಲಿ, ವರ್ಷವಿಡೀ ಪ್ರವಾಸಿಗರ ಕಲರವ ಕೇಳಿ ಬರುತ್ತಲೇ ಇರುತ್ತದೆ.

ಕೆಳಭಾಗದಲ್ಲಿ ನಿಂತು ನೋಡಿದರೆ, ಅಂಕುಡೊಂಕು ರಸ್ತೆ, ಅದರ ಮೇಲೆ ನಿಧಾನವಾಗಿ ಚಲಿಸುವ ಕಾರುಗಳು, ಅಕ್ಕಪಕ್ಕದ ಮನೆಯ ಅಂಗಳಗಳ ಸುಂದರ ಟೈಲ್ಸ್‌ಗಳ ವರ್ಣ ವೈವಿಧ್ಯ, ವರ್ಣರಂಜಿತ ಹೂವುಗಳು, ಹಸಿರಿನ, ಅದ್ಭುತ ಲೋಕವು ತೆರೆದುಕೊಳ್ಳುತ್ತದೆ. ಮೇಲ್ಭಾಗದಿಂದ ಕೆಳಗೆ ದೃಷ್ಟಿಹಾಯಿಸಿದರೆ ಹೊಳೆಯುವ ಬೇ ಬ್ರಿಡ್ಜ್, ಕಣ್ಣು ಕೋರೈಸುವ ಅದ್ಭುತ ಕಟ್ಟಡಗಳು, ಪ್ರಶಾಂತ ಕಡಲತೀರದ ಸುಂದರ ದೃಶ್ಯಾವಳಿ ಕಣ್ಮನ ತಣಿಸುತ್ತವೆ.

ವಿಶ್ವದಲ್ಲೇ ಅತ್ಯಂತ ದುಬಾರಿ ಸ್ಥಳವಾದ ಇದರ ಸಮೀಪದಲ್ಲೇ ಫಿಷರ್‌ಮ್ಯಾನ್ ವಾಫ್, ನಾರ್ತ್‌ಬೀಚ್, ಜಗದ್ವಿಖ್ಯಾತ ಚಾಕೊಲೇಟ್ ದೊರೆ ಗ್ರಿರಾದರ್ಲಿ ಸ್ಕ್ವೇರ್ ಕಾಣಸಿಗುತ್ತದೆ.

■ ಎಸ್. ಪ್ರಭಾವತಿ, ಬೆಂಗಳೂರು